# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 58(484) |
| ಸದಸ್ಯರ ಹೆಸರು | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.07.2024 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯಾದ್ಯಂತ ಇರುವ ಒಟ್ಟು ಗ್ರಾಮೀಣ (ಪಂಚಾಯತಿ) ರಸ್ತೆಗಳ ಸರಾಸರಿ ವಿಸ್ತೀರ್ಣ ಎಷ್ಟು ಗ್ರಾಮೀಣ (ಪಂಚಾಯತಿ) ರಸ್ತೆಗಳೆಂದು ಅಧಿಸೂಚಿತಗೊಳಿಸಲು ಇರುವ ಮಾನದಂಡಗಳೇನು; (ವಿವರ ನೀಡುವುದು)</td><td>ರಾಜ್ಯದಲ್ಲಿ ಒಟ್ಟು ಗ್ರಾಮೀಣ ರಸ್ತೆ ವಿಸ್ತೀರ್ಣ ಡಿ.ಆರ್.ಆರ್.ಪಿ ಪ್ರಕಾರ ಈ ಕೆಳಕಂಡಂತಿರುತ್ತದೆ
<table>
<tr><th>ಕ್ರಸಂ.</th><th>ರಸ್ತೆ ಮೇಲ್ಮೈ</th><th>ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)</th></tr>
<tr><td>1</td><td>ಡಾಂಬರೀಕರಣ (Asphalt Road )</td><td>62,157.00</td></tr>
<tr><td>2</td><td>ಖಡೀಕರಣ/ಜಲ್ಲಿರಸ್ತೆ (WBM Road )</td><td>22,060.00</td></tr>
<tr><td>3</td><td>ಮಣ್ಣಿನ ರಸ್ತೆ (Gravel Road )</td><td>1,14,279.00</td></tr>
<tr><td></td><td>ಒಟ್ಟು</td><td>1,98,496.00</td></tr>
</table>
3 ರಿಂದ 5 ಮೀ. ಅಗಲ ಇರುವ ಗ್ರಾಮೀಣ ರಸ್ತೆಗಳನ್ನು ಡಿ.ಆರ್.ಆರ್.ಪಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕುರಿತು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಸೇರ್ಪಡೆಗೊಳಿಸಲಾಗುತ್ತಿದೆ.</td></tr>
<tr><td>ಆ</td><td>ಶಿವಮೊಗ್ಗ ಜಿಲ್ಲೆಯ ಯಾವ ಯಾವ ಕ್ಷೇತ್ರದ ಪಂಚಾಯತಿ ರಸ್ತೆಗಳನ್ನು ಪಿಎಂಜಿಎಸ್‌ವೈ ಮತ್ತು ಸಿಎಂಜಿಎಸ್ ವೈ ಯೋಜನೆಯಡಿ ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; (ವಿವರ ನೀಡುವುದು)</td><td>• ಪಿಎಂಜಿಎಸ್‌ವೈ ಯೋಜನೆಯಡಿ ಯಾವುದೇ ಹೊಸ ರಸ್ತೆಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುವುದಿಲ್ಲ .<br><br>• ಸಿಎಂಜಿಎಸ್‌ವೈ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯ ಡಿ.ಆರ್ .ಆರ್.ಪಿ ಪಟ್ಟಿಯಲ್ಲಿನ ಗ್ರಾಮೀಣ ರಸ್ತೆಗಳನ್ನುಆಯ್ಕೆ ಮಾಡಿ ಪ್ರತಿ ಸಾಲಿಗೆ ಆರ್ಥಿಕ ಇಲಾಖೆಯು ಜಿಲ್ಲಾವಾರು ಹಂಚಿಕೆ ಮಾಡುವ ಅನುದಾನದಲ್ಲಿ ರಸ್ತೆಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.</td></tr>
<tr><td>ಇ</td><td>ಪಂಚಾಯತಿ ರಸ್ತೆಗಳನ್ನು ಈ ಯೋಜನೆಯಡಿ ಸೇರ್ಪಡೆಗೊಳಿಸಲು ಸರ್ಕಾರ ಅನುಸರಿಸುವ ಮಾನದಂಡಗಳೇನು;</td><td>• ಸಿಎಂಜಿಎಸ್‌ವೈ ಯೋಜನೆಯಡಿ 3 ರಿಂದ 5 ಮೀ. ಅಗಲ ಇರುವ ಗ್ರಾಮೀಣ ರಸ್ತೆಗಳನ್ನು ಡಿ.ಆರ್.ಆರ್.ಪಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕುರಿತು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿ</td></tr>
</table>

| | | |
|---|---|---|
| | | ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಸೇರ್ಪಡೆಗೊಳಿಸಲಾಗುತ್ತಿದೆ.<br>• **ಪಿಎಂಜಿಎಸ್‌ವೈ ಯೋಜನೆಯಡಿ** ಹೊಸ ರಸ್ತೆಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುವುದಿಲ್ಲ. ಈ ಹಿಂದೆ ಈ ಯೋಜನೆಯಡಿ ಪಂಚಾಯಿತಿ ರಸ್ತೆಗಳನ್ನು ಆಯ್ಕೆ ಮಾಡುವಾಗ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡದಂತೆ 500 ಅಥವಾ ಅದಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ಜನವಸತಿಗಳಿಗೆ ಹಾಗೂ ಅತಿ ಅವಶ್ಯವಿರುವ ಗ್ರಾಮೀಣ ಕೃಷಿ ಮಾರುಕಟ್ಟೆ, ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ಸಂಪರ್ಕಿಸುವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿತ್ತು. |
| ಈ | ಈ ಪಂಚಾಯತಿ ರಸ್ತೆಗಳನ್ನು ಈ ಯೋಜನೆಯಡಿ ಸೇರ್ಪಡೆಗೊಳಿಸಲು ಯಾವ ಕಾಲಮಿತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು? (ವಿವರ ನೀಡುವುದು) | • ಪಿಎಂಜಿಎಸ್‌ವೈ ಯೋಜನೆಯಡಿ ಯಾವುದೇ ಹೊಸ ರಸ್ತೆಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುವುದಿಲ್ಲ.<br>• ಸಿಎಂಜಿಎಸ್‌ವೈ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯ ಡಿ.ಆರ್.ಆರ್.ಪಿ ಪಟ್ಟಿಯಲ್ಲಿನ ಗ್ರಾಮೀಣ ರಸ್ತೆಗಳನ್ನುಆಯ್ಕೆ ಮಾಡಿ ಪ್ರತಿ ಸಾಲಿಗೆ ಆರ್ಥಿಕ ಇಲಾಖೆಯು ಜಿಲ್ಲಾವಾರು ಹಂಚಿಕೆ ಮಾಡುವ ಅನುದಾನದಲ್ಲಿ ರಸ್ತೆಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. |

**ಕಡತ ಸಂಖ್ಯೆ: ಗ್ರಾಅಪ:ಆರ್‌ಆರ್‌ಸಿ:ಎಲ್‌ಸಿಕ್ಯೂ:484:153ನೇಅ:2024**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಸಚಿವರು